# ಮೈಸೂರು ವಿಶ್ವವಿದ್ಯಾನಿಲಯ

ದೂರವಾಣಿ ಸಂಖ್ಯೆ : 0821-2419212
ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ
ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570 005.

ಸಂಖ್ಯೆ: ಪ.ವಿ. ಆರ್.ವಿ/2022-23

ದಿನಾಂಕ: 31/12/2022

## ಪ್ರಕಟಣೆ

ಜೂನ್-2022ರಲ್ಲಿ ನಡೆದ ಸ್ನಾತಕ ಪದವಿ(NEP) **(B.P.Ed, UG.Diploma, RIE (UG), B.Arch, B.Plan(B.Tech), B.A.SLP, B.Ed(Special Education)** ಯ ಮೊದಲನೇ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶಗಳನ್ನು ಪ್ರಕಟಿಸಲಾಗಿದ್ದು, ಈ ಸಂಬಂಧ ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ(UUCMS) ಮರುಮೌಲ್ಯಮಾಪನ/ ಉತ್ತರ ಪತ್ರಿಕೆಯ ನಕಲು ಪ್ರತಿ/ಉತ್ತರ ಪತ್ರಿಕೆ ವೀಕ್ಷಣೆ/ಮರುಸಂಕಲನದ ಬಗ್ಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಿದೆ.

| ಕ್ರಮ ಸಂಖ್ಯೆ | ವಿವರ | ದಿನಾಂಕ |
|---|---|---|
| 1 | ಮರುಮೌಲ್ಯಮಾಪನ/ಉತ್ತರ ಪತ್ರಿಕೆಯ ನಕಲು ಪ್ರತಿ/ಉತ್ತರ ಪತ್ರಿಕೆ ವೀಕ್ಷಣೆ/ ಮರುಸಂಕಲನದ ಬಗ್ಗೆ ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ ಶುಲ್ಕ ಪಾವತಿಮಾಡಿ ಅರ್ಜಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: | 10-01-2023 |
| 2 | ಮರುಮೌಲ್ಯಮಾಪನಶುಲ್ಕ (ಪ್ರತಿ ಪತ್ರಿಕೆಗೆ) | ರೂ. 1320-00 |
| 3 | ಉತ್ತರ ಪತ್ರಿಕೆ ನೋಡುವಿಕೆ/ಮರು ಸಂಕಲನಕ್ಕೆ (ಪ್ರತಿ ಪತ್ರಿಕೆಗೆ) | ರೂ. 605-00 |
| 4 | ಉತ್ತರ ಪತ್ರಿಕೆಗಳ ಜೆರಾಕ್ಸ್ ಪ್ರತಿಗೆ (ಪ್ರತಿ ಪತ್ರಿಕೆಗೆ) | ರೂ. 803-00 |

**url:** uucms.karnataka.gov.in ನಲ್ಲಿ **ವಿದ್ಯಾರ್ಥಿಗಳಿಗೆ (Student portal)** ನಲ್ಲಿ **ಮರುಮೌಲ್ಯಮಾಪನ/ಉತ್ತರ ಪತ್ರಿಕೆಗಳ ಜೆರಾಕ್ಸ್ ಪ್ರತಿ/ ಉತ್ತರ ಪತ್ರಿಕೆಗಳ ಮರುಸಂಕಲನಕ್ಕೆ ಅರ್ಜಿ** ಸಲ್ಲಿಸಲು **ಅವಕಾಶ ಕಲ್ಪಿಸಲಾಗಿದೆ.**

**ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಕಲ್ಪಿಸಿರುವ ವೆಬ್‌ಸೈಟ್ ಲಿಂಕ್ (Student portal)** ನಲ್ಲಿ **ಲಾಗ್‌ಇನ್ ಆದರೆ ವಿದ್ಯಾರ್ಥಿಯ ಪರೀಕ್ಷಾ ವಿವರಗಳು ದೊರೆಯುತ್ತವೆ. ನಂತರ ಯಾವ ಸೆಮಿಸ್ಟರಿನ ಯಾವ ವಿಷಯಕ್ಕೆ/ವಿಷಯಗಳಿಗೆ ಉತ್ತರ ಪತ್ರಿಕೆಯ ಜೆರಾಕ್ಸ್ ಪ್ರತಿ/ಮರುಮೌಲ್ಯಮಾಪನ/ಮರುಸಂಕಲನಕ್ಕೆ ಬೇಕಾಗಿದೆ ಎಂದು ಗುರುತಿಸಬೇಕು ಹಾಗೂ ನಿಗಧಿತ ಶುಲ್ಕವನ್ನು ಪೇಮಂಟ್ ಲಿಂಕ್ ಮುಖಾಂತರ ಡೆಬಿಟ್/ಕ್ರೆಡಿಟ್** ಕಾರ್ಡ್ **ಅಥವಾ ನೆಟ್ ಬ್ಯಾಂಕಿಂಗ್ ಮುಖಾಂತರ ಪಾವತಿಸಿದ ನಂತರ ಇದರ ಮುದ್ರಿತ ಒಂದು ಪ್ರತಿಯನ್ನು ವ್ಯಾಸಂಗ ಮಾಡಿದ ಕಾಲೇಜಿಗೆ ನೀಡಿ ಸ್ವೀಕೃತಿ ಪಡೆಯಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ** ಸಂಖ್ಯೆ: **0821-2419225/212 ಅನ್ನು ಸಂಪರ್ಕಿಸುವುದು.**

ಸೂಚನೆ:

1. ಮರುಮೌಲ್ಯಮಾಪನ ಶುಲ್ಕ ಪಾವತಿಸಲು ನಿಗದಿಪಡಿಸಿರುವ ದಿನಾಂಕವನ್ನು ಯಾವುದೇ ಕಾರಣಕ್ಕಾಗಿ ವಿಸ್ತರಿಸಲಾಗುವುದಿಲ್ಲ. ಈ ಮಾಹಿತಿಯನ್ನು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರುಗಳು ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ತಂದು ಸೂಕ್ತ ಮಾರ್ಗದರ್ಶನ ನೀಡುವುದು.
2. ಉತ್ತರ ಪತ್ರಿಕೆಯ ನಕಲು ಪ್ರತಿಯನ್ನು ವಿದ್ಯಾರ್ಥಿಯ e-mail ವಿಳಾಸಕ್ಕೆ ಕಳುಹಿಸಿಕೊಡಲಾಗುವುದು/ವಿದ್ಯಾರ್ಥಿ ಹಸ್ತ ನೀಡಲಾಗುವುದು.

2/1/23

ಕುಲಸಚಿವ (ಪರೀಕ್ಷಾಂಗ)

ಗೆ,

ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಟ್ಟ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ಮುಂದಿನ ಕ್ರಮಕ್ಕಾಗಿ/ಮಾಹಿತಿಗಾಗಿ.

ಪ್ರತಿ,

1. ಪರೀಕ್ಷಾ ವಿಭಾಗದ ಎಲ್ಲಾ ಅಧಿಕಾರಿಗಳು/ಅಧೀಕ್ಷಕರುಗಳಿಗೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
3. ಕುಲಪತಿಗಳು/ಕುಲಸಚಿವರು/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು ರವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ವಿಶೇಷ ಅಧಿಕಾರಿ, ಪರೀಕ್ಷಾ ಸುಧಾರಣಾ ಘಟಕ, ಪರೀಕ್ಷಾ ಭವನ. ಮೈ.ವಿ.ವಿ, ಮೈಸೂರು.
5. ಕಛೇರಿ ಪ್ರತಿ